# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಸಿ.ಸಿ ನಂ.199-2017** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಹದೇವು<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 05-02-2024. |

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ ವಕೀಲರಿಂದಃ**

ನನಗೆ ಆರೋಪಿ ಸುಮಾರು 10 ವರ್ಷಗಳಿಂದ ಪರಿಚಿತರು. ಆರೋಪಿ ನಮ್ಮ ಊರಿಗೆ ಸಂತೆಗೆ ಬರುತ್ತಿದ್ದು ಆಗ ನನಗೆ ಅವರು ಪರಿಚಿತರಾಗಿರುತ್ತಾರೆ. ಪರಿಚಯವಾದ ನಂತರ ಆರೋಪಿ ಯಾವ ಊರು, ಅವರಿಗೆ ಆಸ್ತಿ ಇದೆಯೇ ಇಲ್ಲವೇ ಎಂಬುದರ ಬಗ್ಗೆ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿ ಕುರಿಹುಂಡಿ ಗ್ರಾಮದವರು ಎಂದು ನನಗೆ ಗೊತ್ತು ಎಂದು ನುಡಿಯುತ್ತಾರೆ. ಆರೋಪಿ ಪರಿಚಯವಾದ ನಂತರ ನಾನು ಆರೋಪಿಯ ಊರಿಗೆ ಹೋಗಿರುವುದಿಲ್ಲ. ನಾನು ಆರೋಪಿಗೆ ಏನು ಆಸ್ತಿ ಇದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಈ ಪಿರ್ಯಾದಿನಲ್ಲಿ ನಮೂದಿಸಿದ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಆರೋಪಿ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ. ನಾನು ಆರೋಪಿಗೆ ನೋಟಿಸ್ ನೀಡಿದ ನಂತರ, ಅವರು ನನ್ನ ನೋಟಿಸಿಗೆ ಪ್ರತ್ಯುತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಪ್ರತ್ಯುತ್ತರದ ತಿಳುವಳಿಕೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

2. ನಾನು ಆರೋಪಿ ಮತ್ತು ಅವರ ಕುಟುಂಬದವರ ವಿರುದ್ಧ ಮತ್ತೊಂದು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಸರು ಮಹದೇವು, ನನ್ನ ತಂದೆಯವರ ಹೆಸರು ಬೀರೇಗೌಡ ಎಂದರೆ ಸರಿ. ಅಡಕನಹಳ್ಳಿ ಹುಂಡಿ ಗ್ರಾಮದಲ್ಲಿ ವಾಸವಾಗಿರುವ ಬಿರೇಗೌಡರ ಮಗ ಮಹದೇವು ಎಂದರೆ ನಾನೇ ಎಂದರೆ ಸರಿ. ನಾನು ಎಂ.ಸಿ.ದಿಲೀಪ್ ಕುಮಾರ್ ವಕೀಲರಿಂದ ಆರೋಪಿ ಮತ್ತು ಅವರ ಕುಟುಂಬದವರಿಗೆ ಒಂದು ನೋಟಿಸ್ ಅನ್ನು ನೀಡಿಸಿರುತ್ತೇನೆ ಎಂದರೆ

ಸರಿಯಲ್ಲ. ನಾನು ನೋಟಿಸ್ ನೀಡಿದ ನಂತರ ಆರೋಪಿ ಮತ್ತು ಆತನ ಕುಟುಂಬದ ವಿರುದ್ಧ ನಂಜನಗೂಡಿನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ, ನ್ಯಾಯಾಲಯದಲ್ಲಿ ಓ.ಎಸ್.40/2017 ರಂತೆ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವಾವು ಇನ್ನೂ ವಿಚಾರಣಾ ಹಂತದಲ್ಲಿ ಇದ್ದು ದಿ.07-03-2024 ಕ್ಕೆ ತಕರಾರಿಗೆ ಎಂದು ಮೂಂದೂಡಲ್ಪಟ್ಟಿರುತ್ತದೆ ಎಂದರೆ ಸರಿಯಲ್ಲ. ದಿ.11-02-2014 ರಂದು ನಡೆದಿರುವ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಆರೋಪಿ ನಡುವೆ ಬೇರೆ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚೆಕ್ಕಿಗೆ ಸಂಬಂಧಪಟ್ಟ ವ್ಯವಹಾರ ನಡೆದಿರುತ್ತದೆ ಎಂದರೆ ಸರಿಯಲ್ಲ. ನೀವು ಆರೋಪಿಯ ವಿರುದ್ಧ ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಪ್ರಕರಣವನ್ನು ಸಲ್ಲಿಸಿರುವುದಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಆ ವ್ಯವಹಾರವೇ ಬೇರೆ, ಈ ವ್ಯವಹಾರವೇ ಬೇರೆ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ನಡುವೆ ಬೇರೆ ಯಾವ ವ್ಯವಹಾರವ ನಡೆದಿದೆ, ಯಾವ ದಿನಾಂಕಂದು ನಡೆದಿದೆ ಎಂದು ಹೇಳಲು ಸಾಧ್ಯವೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ನನ್ನ ಮತ್ತು ಆರೋಪಿಯ ನಡುವೆ ಬೇರೆ ವ್ಯವಹಾರ ನಡೆದಿತ್ತು ಎಂದು ಪಿರ್ಯಾದಿನಲ್ಲಿ ನಮೂದು ನಿಮಗೆ ಏನಾದರೂ ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ತೊಂದರೆ ಇತ್ತು ಎಂದು ನುಡಿಯುತ್ತಾರೆ. ಆದರೆ ಯಾವ ರೀತಿ ತೊಂದರೆ ಇತ್ತು ಎಂದು ಹೇಳಲು ಆಗುವುದಿಲ್ಲ.

3. ದಿ.11-02-2014 ರ ಕರಾರಿನ ಪ್ರಕಾರ ನಾನು ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ಮತ್ತು ಅವರ ಕುಟುಂಬದವರ ನಡುವೆ ಕ್ರಯದ ವ್ಯವಹಾರವಾದ ಸಮಯ ನಾನು ಆರೋಪಿಯಿಂದ ಸಹಿ ಮಾಡದೇ ಇರುವ ಖಾಲಿ ಚೆಕ್ಕನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಕ್ರಯದ ಕರಾರಿನ ಸಮಯ ಆರೋಪಿಯಿಂದ ಖಾತ್ರಿಗಾಗಿ ಪಡೆದುಕೊಂಡಿದ್ದ ಖಾಲಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ಹಾಗೂ ಕರಾರಿನ ನಿರ್ದಿಷ್ಟ ಅನುಷ್ಠಾನಕ್ಕಾಗಿ ದಾವೆಯನ್ನು ಹೂಡುವ ಪೂರ್ವದಲ್ಲಿ ನೀಡಿದ ಎರಡೂ ತಿಳುವಳಿಕೆಗಳಿಗೂ ಸೂಕ್ತವಾದ ಪ್ರತ್ಯುತ್ತರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನ್ನ ಹಾಗೂ ಆರೋಪಿ ನಡುವೆ ಈ ಪಿರ್ಯಾದಿನಲ್ಲಿ

ನಮೂದಿಸಿರುವಂತೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಾಲ ನೀಡಿದ ದಿವಸ ನನ್ನ ಮನೆಯಲ್ಲಿ ನಾನು ಒಬ್ಬನೇ ಇದ್ದೆನು. ನಾನು ಆರೋಪಿಗೆ ರೂ.6,00,000/- ಗಳನ್ನು ನಗದಾಗಿ ನೀಡಿರುತ್ತೇನೆ. ನಾನು ಆರೋಪಿಗೆ ಸಾಲ ನೀಡಿದ ಸಮಯ ಕ್ರಯ ಪತ್ರವನ್ನು ನೋಂದಣಿ ಮಾಡಿಕೊಡುವಂತೆ ಅವರನ್ನು ಕೇಳಿರುವುದಿಲ್ಲ ಆರೋಪಿಯಿಂದ ಚೆಕ್ಕನ್ನು ತೆಗೆದುಕೊಂಡು ಆರೋಪಿಗೆ ಸಾಲವಾಗಿ ಹಣ ನೀಡಿರುತ್ತೇನೆ. ನಾನು ಹೇಳುವಂತೆ ಆರೋಪಿಯಿಂದ ಚೆಕ್ಕನ್ನು ಪಡೆದುಕೊಂಡು ಆರೋಪಿಗೆ ಹಣವನ್ನು ಸಾಲವಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯದ ಕರಾರಿನಲ್ಲಿ ನಮೂದಿಸಿದ ಷರತ್ತುಗಳಿಗೆ ಅನುಗುಣವಾಗಿ ನಾನು ನಡೆದುಕೊಳ್ಳದೇ ಇದ್ದ ಕಾರಣ ಕ್ರಯದ ಕರಾರು ಅಂತ್ಯಗೊಂಡಿದ್ದರಿಂದ ನಾನು ಕ್ರಯದ ಕರಾರಿನ ಖಾತ್ರಿಗಾಗಿ ಆರೋಪಿಯಿಂದ ಪಡೆದುಕೊಂಡಿದ್ದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಪಿರ್ಯಾದನ್ನು ಆರೋಪಿ ವಿರುದ್ಧ ಸಲ್ಲಿಸಿರುವುದರಿಂದ ಈ ಪಿರ್ಯಾದು ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಮೂದಿಸಿರುವಂತಹ ವ್ಯವಹಾರವು ನನ್ನ ಮತ್ತು ಆರೋಪಿ ನಡುವೆ ನಡೆದಿರುವುದಿಲ್ಲ ಮತ್ತು ಆರೋಪಿ ನನಗೆ ಮೋಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯವನ್ನು ಕೋರಿದ್ದು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**